# ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001. ದೂರವಾಣಿ : 080-22224212

ಸಂಖ್ಯೆ : ಸಿಆಸುಇ 16 ಮಾಸ(ಅಮುಚು 3)2018 ದಿನಾಂಕ : 10-5-2018.

**ಪತ್ರಿಕಾ ಪ್ರಕಟಣೆ**

**ಚುನಾವಣಾ ಸಿಬ್ಬಂದಿಯ ಕಲ್ಯಾಣ ಸೌಲಭ್ಯಗಳು**

ಬೆಂಗಳೂರು, ಮೇ 10 : ವಿಧಾನಸಭಾ ಚುನಾವಣೆ-2018 ರಲ್ಲಿ ಕಾರ್ಯನಿರ್ವಹಿಸುವ ಚುನಾವಣಾ ಸಿಬ್ಬಂದಿಯ ಸುರಕ್ಷತೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ವತಿಯಿಂದ ಹಲವಾರು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ.

ಆಯಾ ಜಿಲ್ಲಾ ಚುನಾವಣಾಧಿಕಾರಿಗಳು ಚುನಾವಣಾ ಸಿಬ್ಬಂದಿಯ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರಲು ನೋಡೆಲ್ ಅಧಿಕಾರಿಯನ್ನು ನೇಮಕ ಮಾಡಿ ಕಾನೂನು ಮತ್ತು ಶಾಸನಬದ್ಧ ಕ್ರಮಗಳ ಬಗ್ಗೆ ನೋಡೆಲ್ ಅಧಿಕಾರಿಗಳಿಗೆ ತರಬೇತಿ ನೀಡಿದ್ದಾರೆ.

**ತರಬೇತಿ:**

ಚುನಾವಣಾ ಸಿಬ್ಬಂದಿಗೆ ತರಬೇತಿಯ ಸ್ಥಳ , ದಿನಾಂಕ ಮತ್ತು ಸಮಯದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಮುಂಚಿತವಾಗಿ ನೀಡಲಾಗುವುದು. ಅವರ ಸಂಪರ್ಕ ಸಂಖ್ಯೆಯ ಮಾಹಿತಿಯನ್ನು ಸಂಗ್ರಹಿಸಿ, ತರಬೇತಿ ಕಾರ್ಯಕ್ರಮದ ಬಗ್ಗೆ ಬಲ್ಕ್ ಮೆಸೇಜಿಂಗ್ ಮೂಲಕ ತ್ವರಿತವಾಗಿ ಮಾಹಿತಿ ನೀಡಲಾಗುವುದು.

**ತರಬೇತಿ ಸ್ಥಳ ಮತ್ತು ರವಾನೆ ಕೇಂದ್ರಗಳಲ್ಲಿ ಸೂಕ್ತ ವ್ಯವಸ್ಥೆ :**

ತರಬೇತಿ ಮತ್ತು ರವಾನೆ ಕೇಂದ್ರಗಳಿಗೆ ಸೂಕ್ತ ಸ್ಥಳ ನಿಗದಿ, ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಮತ್ತು ಸಹಾಯಕೇಂದ್ರ ಸ್ಥಾಪನೆಗೆ ವಿಶೇಷ ಗಮನ ನೀಡಿ, ತರಬೇತಿ ಕೇಂದ್ರದಲ್ಲಿ ಅಗತ್ಯ ಪ್ರಮಾಣದ ಪೀಠೋಪಕರಣಗಳು ಮತ್ತು ಮೂಲಭೂತ ಸೌಕರ್ಯಗಳಿರುವ ಕೊಠಡಿಗಳ ವ್ಯವಸ್ಥೆ ಮಾಡಲಾಗುವುದು. ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ಸಿಬ್ಬಂದಿಗೆ ಊಟದ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಪ್ರಯಾಣದ ಆರಂಭದ ಸ್ಥಳದಿಂದ ನಿಯೋಜಿತ ಮತ ಕೇಂದ್ರವನ್ನು ನಿಗದಿತ ಸಮಯದಲ್ಲಿ ತಲುಪಲು ಸೂಕ್ತ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗುವುದು.

**ಅಂಚೆ ಮತಪತ್ರಗಳ ವಿತರಣೆ ಮತ್ತು ಸ್ವೀಕಾರ ಕೇಂದ್ರ ಸ್ಥಾಪನೆ :**

ಚುನಾವಣಾ ಸಿಬ್ಬಂದಿಯ ಮತದಾನದ ಹಕ್ಕು ಸಂರಕ್ಷಣೆಗೆ ರಾಷ್ಟ್ರ ಚುನಾವಣಾ ಆಯೋಗ ಮಹತ್ವ ನೀಡಿದೆ. ಚುನಾವಣಾ ಮತಗಟ್ಟೆ ಅಧಿಕಾರಿಗಳ ಅಂಚೆ ಮತಪತ್ರಗಳ ಸ್ವೀಕಾರ ಕೇಂದ್ರ ಸ್ಥಾಪಿಸಿ, ಇದಕ್ಕೆ ಪೂರಕವಾಗಿ ಚುನಾವಣಾ ಸಿಬ್ಬಂದಿಯ ಮತದಾನದ

ಗುರುತಿನ ಚೀಟಿ, ಕ್ರಮ ಸಂಖ್ಯೆಗಳ ಮಾಹಿತಿಯನ್ನು ಮುಂಚಿತವಾಗಿ ಪಡೆದು ಚುನಾವಣಾ ಸಿಬ್ಬಂದಿಗೆ ತಮ್ಮ ಮತ ಚಲಾವಣೆಗೆ ಅವಕಾಶ ನೀಡಲಾಗಿದೆ. ಮತಗಟ್ಟೆಗಳಲ್ಲಿ ನಿಯೋಜನೆಗೊಂಡಿರುವ ಚುನಾವಣಾ ಸಿಬ್ಬಂದಿ ತಮ್ಮ ಅಂಚೆ ಮತಚಲಾಯಿಸುವುದನ್ನು ಕಡ್ಡಾಯವಾಗಿ ವಿಡಿಯೋ ಚಿತ್ರೀಕರಿಸಲು ಮಾಡುವ ಜವಾಬ್ದಾರಿ ನೋಡಲ್ ಅಧಿಕಾರಿಗಳದ್ದಾಗಿದೆ.

**ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡಿರುವ ಸಿಬ್ಬಂದಿ ಗಾಯಗೊಂಡಲ್ಲಿ ಅಥವಾ ಮೃತಪಟ್ಟಲ್ಲಿ ದೊರೆಯುವ ಪರಿಹಾರ**

ಚುನಾವಣೆ ನಿರ್ವಹಣೆಗೆ ಸಂಬಂಧಿಸಿದಂತೆ ನೇಮಕ ಮಾಡಿಕೊಳ್ಳುವ ಅಧಿಕಾರಿ/ಸಿಬ್ಬಂದಿಗಳು ಯಾವುದೇ ಅವಘಡಗಳಿಗೆ ತುತ್ತಾದಲ್ಲಿ ಭಾರತ ಚುನಾವಣಾ ಆಯೋಗವು ಶಿಫಾರಸ್ಸು ಮಾಡಿರುವ ಪರಿಹಾರ :

· ಚುನಾವಣಾ ಕರ್ತವ್ಯದಲ್ಲಿರುವ ಅಧಿಕಾರಿಯು ನಿಧನ ಹೊಂದಿದ ಸಂದರ್ಭದಲ್ಲಿ ಆ ಅಧಿಕಾರಿಯ ಹತ್ತಿರದ ರಕ್ತ ಸಂಬಂಧಿಗೆ 10 ಲಕ್ಷ ರೂಗಳನ್ನು ಸಂದಾಯ ಮಾಡಬೇಕು.

· ಮರಣವು ಯಾವುದೇ ಹಿಂಸಾತ್ಮಕ ಚಟುವಟಿಕೆ, ಉಗ್ರಗಾಮಿಗಳು ಅಥವಾ ಪ್ರಕೃತಿ ವಿಕೋಪ, ಬಾಂಬ್ ಶಸ್ತ್ರಗಳ ದಾಳಿ, ಸಮಾಜ-ಘಾತುಕ ಅಂಶಗಳಿಂದ ಸಂಭಂವಿಸಿದ್ದಲ್ಲಿ, ಪರಿಹಾರದ ಮೊತ್ತವು ದ್ವಿಗುಣಗೊಳಿಸಿ ರೂ 20 ಲಕ್ಷ ರೂಗಳನ್ನು ನೀಡತಕ್ಕದ್ದು.

· ಅಂಗವಿಕಲತೆ, ದೃಷ್ಟಿ ಕಳೆದುಕೊಳ್ಳುವುದು ಇತ್ಯಾದಿ ಶಾಶ್ವತ ಶಾರೀರಿಕ ದೌರ್ಬಲ್ಯಗಳು ಉಂಟಾದ ಸಂದರ್ಭದಲ್ಲಿ ಕನಿಷ್ಠ 5 ಲಕ್ಷ ರೂಗಳನ್ನು ಅನುಗ್ರಹ ಪೂರಕ ಪರಿಹಾರವಾಗಿ ಸಂದಾಯ ಮಾಡುವುದು (ಮೇಲೆ ಹೇಳಿದಂತೆ ಇಂತಹ ಅವಘಡಗಳು ಉಗ್ರಗಾಮಿಗಳು ಅಥವಾ ಸಮಾಜ ಘಾತುಕ ಶಕ್ತಿಗಳಿಂದ ಸಂಭವಿಸಿದಲ್ಲಿ ಈ ಪರಿಹಾರವನ್ನೂ ದ್ವಿಗುಣಗೊಳಿಸತಕ್ಕದ್ದು).

ಇದರೊಂದಿಗೆ ರಾಜ್ಯ ಸರ್ಕಾರವು ಸರ್ಕಾರಿ ನೌಕರರಿಗೆ ಕೆಸಿಎಸ್ಆರ್ ನಿಯಮಗಳನ್ವಯ ಡಿ.ಸಿ.ಆರ್.ಜಿ. ನಿವೃತ್ತಿ ವೇತನ, ಕೆಜಿಐಡಿ, ಸಾಮೂಹಿಕ ಜೀವವಿಮೆ(ಜಿ.ಐ.ಎಸ್.) ಸೇರಿದಂತೆ ಲಭ್ಯವಿರುವ ಇತರೆ ಎಲ್ಲಾ ಅರ್ಹ ಸವಲತ್ತುಗಳನ್ನು ನೀಡಲಾಗುತ್ತಿದೆ.

**ಆರೋಗ್ಯದ ಬಗ್ಗೆ ನಿಗಾವಣೆ :**

· ತುರ್ತು ವೈದ್ಯಕೀಯ ಸಂದರ್ಭದಲ್ಲಿ ವೈದ್ಯಕೀಯ ನೆರವು ನೀಡಲು ವೈದ್ಯರ ತಂಡವನ್ನು ನಿಯೋಜಿಸಬೇಕು. ಕರ್ತವ್ಯ ನಿರತ ಚುನಾವಣಾ ಸಿಬ್ಬಂದಿಗೆ ತುರ್ತು ಸಂದರ್ಭದಲ್ಲಿ ವೈದ್ಯಕೀಯ ನೆರವು ದೊರೆಯಬೇಕು. ಚುನಾವಣಾ ಸಿಬ್ಬಂದಿಗೆ ಮತದಾನದ ದಿನವಷ್ಟೇ ಅಲ್ಲದೆ, ಚುನಾವಣಾ ಕಾರ್ಯಕ್ಕೆ ತೆರಳುವ ಮತ್ತು ಅಲ್ಲಿಂದ ಮರಳುವ ದಿನಗಳಂದು ರವಾನೆ ಕೇಂದ್ರಗಳಲ್ಲಿ ಹಾಗೂ ತರಬೇತಿ ದಿನಗಳಂದು ಸೂಕ್ತ ವೈದ್ಯಕೀಯ ವ್ಯವಸ್ಥೆ ಕಲ್ಪಿಸಬೇಕು. ಇದಕ್ಕೆ ಪೂರಕವಾಗಿ ಜಿಲ್ಲಾ ಆರೋಗ್ಯಾಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನಿಯೋಜಿಸಬೇಕು.

**ವಿಶೇಷ ಗಮನಹರಿಸಬೇಕಾದ ಅಂಶಗಳು**

· ಚುನಾವಣಾ ಪೂರ್ವ ತರಬೇತಿ ಕೇಂದ್ರದಲ್ಲಿ ಆರೋಗ್ಯ ಸುರಕ್ಷತಾ ತಂಡವನ್ನು ನಿಯೋಜಿಸಬೇಕು ಹಾಗೂ ತುರ್ತು ಸಂದರ್ಭಗಳಲ್ಲಿ ವೈದ್ಯಕೀಯ ನೆರವು ನೀಡಲು ಜಿಲ್ಲಾ ಮತ್ತು ತಾಲೂಕು ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧಿ ಇನ್ನಿತರ ಸಾಮಗ್ರಿಗಳೊಂದಿಗೆ ತಕ್ಕ ವ್ಯವಸ್ಥೆ ಮಾಡಿಕೊಳ್ಳಬೇಕು. ಆಕಸ್ಮಿಕವಾಗಿ ವಿಶೇಷ ತುರ್ತುಚಿಕಿತ್ಸೆ ಅಗತ್ಯವಾದಲ್ಲಿ ಹತ್ತಿರದ ಸ್ಪೆಷಾಲಿಟಿ ಆಸ್ಪತ್ರೆಯ ಸಂಪರ್ಕ ಸಂಖ್ಯೆ ಮತ್ತು ಅತಿ ಹತ್ತಿರದ ಮಾರ್ಗದ ಬಗ್ಗೆ ಮುಂಚಿತವಾಗಿ ಮಾರ್ಗ ನಕ್ಷೆಯನ್ನು ಸಿದ್ಧಪಡಿಸಿಕೊಂಡಿರಬೇಕು.

· ಚುನಾವಣಾ ಸಿಬ್ಬಂದಿ ರವಾನೆ ಕೇಂದ್ರಗಳಲ್ಲಿಯೂ ಸೂಕ್ತ ಆರೋಗ್ಯ ಸುರಕ್ಷತಾ ಸೌಕರ್ಯಗಳು ಚುನಾವಣಾ ಸಿಬ್ಬಂದಿಗೆ ಲಭ್ಯವಿರಬೇಕು.

· ಚುನಾವಣಾ ದಿನದಂದು ಹೆಚ್ಚಿನ ಚುನಾವಣಾ ಸಿಬ್ಬಂದಿಗೆ ವೈದ್ಯಕೀಯ ನೆರವು ಬೇಕಾಗಬಹುದು. ಈ ಹಿನ್ನೆಲೆಯಲ್ಲಿ ಆರೋಗ್ಯ ಸಂರಕ್ಷಣಾ ನೋಡಲ್ ಅಧಿಕಾರಿಯು ಚುನಾವಣಾ ಕೇಂದ್ರಕ್ಕೆ ಹತ್ತಿರದಲ್ಲಿರುವ ಪಿಹೆಚ್‌ಸಿ, ಸಿಹೆಚ್‌ಸಿ, ತಾಲೂಕು ಆರೋಗ್ಯ ಕೇಂದ್ರ ಮತ್ತು ಜಿಲ್ಲಾ ಆರೋಗ್ಯ ಕೇಂದ್ರಗಳ ಮಾಹಿತಿ ಸಂಗ್ರಹಿಸಿಟ್ಟು ಕೊಂಡಿರಬೇಕು. ವೈದ್ಯರು ಮತ್ತು ವೈದ್ಯಕೀಯ ಸಹಾಯಕ ಸಿಬ್ಬಂದಿ ಮತದಾನದ ಹಿಂದಿನ ದಿನ ಮತ್ತು ಮತದಾನದ ದಿನ ಕಡ್ಡಾಯವಾಗಿ ಆರೋಗ್ಯ ಕೇಂದ್ರದಲ್ಲಿ ಲಭ್ಯವಿರಬೇಕು. ಜಿಲ್ಲಾ ಆರೋಗ್ಯಾಧಿಕಾರಿಗಳು ತಾಲೂಕು ಆರೋಗ್ಯಾಧಿಕಾರಿಗಳ ಸಭೆ ನಡೆಸಿ ಈ ಎರಡು ದಿನಗಳಲ್ಲಿ ಸದಾ ಕಾಲ ವೈದ್ಯಕೀಯ ನೆರವು ದೊರೆಯುವ ವ್ಯವಸ್ಥೆ ಕಲ್ಪಿಸಲು ಸೂಚಿಸಬೇಕು. ಬಳಕೆಗೆ ಅನುಕೂಲವಾಗುವಂತೆ ಆಂಬುಲೆನ್ಸ್‌ಗಳನ್ನು ಸನ್ನದ್ಧವಾಗಿಟ್ಟುಕೊಳ್ಳಬೇಕು. ತುರ್ತು ಸಂದರ್ಭದಲ್ಲಿ ಗರಿಷ್ಠ 30 ನಿಮಿಷಗಳಲ್ಲಿ ಸ್ಪಂದಿಸಬೇಕು. ಈ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳು ಜಿಲ್ಲಾ ವೈದ್ಯಾಧಿಕಾರಿಗಳು ಮತ್ತು ಸಂಬಂಧಿಸಿದ ಅಧಿಕಾರಿಗಳ ಸಭೆ ನಡೆಸಿ ಚರ್ಚಿಸಬೇಕು.

· ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡಿರುವ ಸಿಬ್ಬಂದಿಯನ್ನು ಚುನಾವಣಾ ಕಾರ್ಯದಿಂದ ಸೂಕ್ತ ಮತ್ತು ನಿಗದಿತ ಸಮಯದಲ್ಲಿ ಬಿಡುಗಡೆಗೊಳಿಸಬೇಕು.

· ಚುನಾವಣಾ ಸಿಬ್ಬಂದಿಗೆ ಗೌರವಧನವನ್ನು ಮುಂಗಡವಾಗಿ ನಗದು ರಹಿತವಾಗಿ ಅವರ ಖಾತೆಗಳಿಗೆ ಜಮಾ ಮಾಡಬೇಕು.

· ಮಹಿಳಾ ಹಾಗು ವಿಶೇಷ ಚೇತನ ಸಿಬ್ಬಂದಿಗೆ ಅಗತ್ಯವಾದ ಪೂರಕ ವಿಶೇಷ ವ್ಯವಸ್ಥೆ ಕಲ್ಪಿಸಬೇಕು.

· ಚುನಾವಣಾ ಸಿಬ್ಬಂದಿಗೆ ಮಾರ್ಗದರ್ಶನ ನೀಡಲು ಪೂರಕವಾಗಿ ಸಹಾಯ ಕೇಂದ್ರವನ್ನು ಸ್ಥಾಪಿಸಬೇಕು.

ಭದ್ರತಾ ಸಿಬ್ಬಂದಿ ಕೇಂದ್ರ ಸಶಸ್ತ್ರ ಮೀಸಲು ಪಡೆಯ ಅನುಕೂಲಕ್ಕೆ ಕ್ರಮಗಳು

· ಚುನಾವಣೆಯ ವಿವಿಧ ಭದ್ರತಾ ಕಾರ್ಯಕ್ಕೆ ನಿಯೋಜನೆಗೊಳ್ಳುವ ಕೇಂದ್ರ ಸಶಸ್ತ್ರ ಮೀಸಲು ಪಡೆಗಳಿಗೆ ಅಗತ್ಯ ವ್ಯವಸ್ಥೆ ಕಲ್ಪಿಸಿ ಅವರು ಆರಾಮದಾಯಕವಾಗಿರುವಂತೆ ನೋಡಿಕೊಳ್ಳಬೇಕು.

· ಅವರುಗಳ ಊಟೋಪಚಾರಕ್ಕೆ ಅಗತ್ಯವಾದ ದಿನಸಿ ಸಾಮಗ್ರಿ, ಅಡುಗೆ ತಯಾರಿಸಿಕೊಳ್ಳಲು ಅನಿಲ ಸಿಲಿಂಡರ್, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಕಲ್ಪಿಸಬೇಕು.

· ಸೂಕ್ತ ಆರೋಗ್ಯ ಸುರಕ್ಷತಾ ಸೌಕರ್ಯಗಳು, ಬೇಸಿಗೆ ಸಂದರ್ಭದಲ್ಲಿ ಚುನಾವಣೆಗಳು ನಡೆಯುತ್ತಿರುವುದರಿಂದ ಫ್ಯಾನ್ ಅಥವಾ ಕೂಲರ್‌ಗಳ ವ್ಯವಸ್ಥೆ ಮಾಡಬೇಕು.

· ಭದ್ರತಾ ಸಿಬ್ಬಂದಿಯ ಅಗತ್ಯಗಳಿಗೆ ಸ್ಪಂದಿಸಲು ಅನುವಾಗುವಂತೆ ಕಂದಾಯ ಇಲಾಖೆಯ ಸ್ಥಳೀಯ ಅಧಿಕಾರಿಯೊಬ್ಬರನ್ನು ನಿಯೋಜಿಸಬೇಕು. ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸಮಯಾವಕಾಶ ಮಾಡಿಕೊಂಡು ಕೇಂದ್ರ ಸಶಸ್ತ್ರ ಮೀಸಲು ಪಡೆ ತಂಗಿರುವ ಸ್ಥಳಕ್ಕೆ ಭೇಟಿ ನೀಡಿ ಅವರೊಂದಿಗೆ ಚರ್ಚಿಸುವ ಮೂಲಕ ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಬೇಕು.

·     ಕಾಲಕಾಲಕ್ಕೆ ಸಭೆ ನಡೆಸಿ ಕೇಂದ್ರ ಸಶಸ್ತ್ರ ಮೀಸಲು ಪಡೆಯ ಬಗ್ಗೆ ಕಾಳಜಿವಹಿಸಬೇಕು ಅಲ್ಲದೆ ಮುಕ್ತ ಚುನಾವಣೆ ನಡೆಸುವಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿ ಕೇಂದ್ರ ಸಶಸ್ತ್ರ ಮೀಸಲು ಪಡೆಯೊಂದಿಗೆ ಚರ್ಚಿಸಿ ವಿಚಾರ ವಿನಿಮಯ ಮಾಡಬೇಕು.

**Office of the Chief Electoral Officer, Karnataka**
Nirvachana Nilaya, Sheshadri Road, Bangalore-560 001.
Telephone 080-22224212

**No. DPAR 16 MC 2018** **Dated : 10-5-2018**

**PRESS NOTE**

**Bengaluru, May 10 :-**

# Welfare measures For Election Staff

The Election Commission has taken up several measures to ensure the safety of election staff. The following are the measures prescribed by the Election Commission for the welfare of the staff:

- **Nodal Officer to monitor Welfare measures of election staff**

  The District Election Officer has been appointed a nodal officer to plan and implement the welfare measures of the election staff. A review meeting has been held to discuss about the precautionary measures to be taken relating to the safety of the staff on election duty. Training on legal and statutory measures have been given to the District Nodal Officers.

- **Training**

  The election staff is provided prior information relating to the place, date and time of the training programme. Their contact phone/mobile numbers is collected to forward bulk messages regarding the training programme.

- **Arrangements at training and dispatch centres**

  Special attention has been given to identify suitable place to establish the training and dispatch centre, provide drinking water facility and help desk. These centres are equipped with necessary furniture and basic infrastructure along with rooms. Arrangements are made to provide food facility to the election staff as per Election Commission's guidelines. They were provided end to end transport facility to reach the booths in time.

## Establishment of postal ballot paper distribution and receiving centre

The Election Commission of India has given utmost importance to safeguard the voting rights of the election staff. Accordingly a centre to receive the postal ballots of polling booth officers has been established. Details like Photo ID card, Sl. No., etc., of the election staff were collected well before time. Opportunity has been given to all the eligible election staff to exercise their franchise.

- **Relief provided in case of injury to the election staff while on duty : Recommendations of the ECI to State Governments**

1. The compensation provided in case of death/injury to the officers on election duty will be as as per the orders issued by the Election Commission of India vide its letter No:

**ECI /218/6/2014/EPS, dated:25.04.2014 - Regarding payment of ex-gratia compensation to family of polling personnel who die or sustain injuries while on election duty**

2. In case of death of any officer who is on election duty a sum of **Rs. 10 lakh** compensation shall be given to the nearest relative of the deceased.

3. In case of death due to any incident of crime, terrorist attack or natural calamity, bomb attack, weapon attack, anti-social activity, a sum of **Rs. 20 lakh** compensation shall be provided to the nearest kin.

4. In case of loss of limbs, loss of vision or any permanent disability a minimum sum of **Rs. 5 lakh** compensation shall be provided (as explained above in case such incidents occur due to terrorist attack or anti-social elements the compensation amount shall be doubled).

5. Along with this, the State Govt. employees shall also receive DCRG retirement fund, KGID, group insurance (GIS) and all other eligible facilities as per KSCR Rules.

## 6.Health Monitoring

### 6.a. From Health Department: Circular no:HFW 75ACS 2018 Dated:05-05-2018 regarding Health arrangements for polling personnel and cashless treatment

**Circular no: HFW75/ACS/2018 Dated-23.4.2018- regarding Healthcare for polling personnel including security personnel during the period of election for Karnataka Legislative Assembly 2018**

Services of a team of doctors shall be provided to meet any cases of medical emergency. The staff on election duty will be able to easily access medical assistance in case of emergency. The staff on election duty shall be provided necessary health facility not only on the day of attending duty but also on the returning day at the dispatch centres. The District Health Officers shall be designated as nodal officers to monitor this.

Points that need to be given special importance

**6.b.** Health Safety team shall be appointed at the pre-election training centre. Arrangements like medical help and emergency medical kits shall be made at the District and Taluk Health Centres. Contact details of the nearest specialty hospital and the nearest route shall be kept handy in case of any emergency.

**6.c.** Proper medical facilities shall also be maintained at the Election Staff dispatch centres.

**6. d.** The election staff may require medical help on the day of election. Hence, the Health Nodal Officer shall keep all the details like the address and phone numbers of the nearest PHC, CHC, Taluk Health Centre and District Health Centres handy. The doctors and health assistants shall be compulsorily present at the Health Centres on the day of elections and the day before. The District Health Officer shall conduct a Taluk Helath Officers meeting and ensure that all required medical help and services are available on those days, along with ambulances that shall respond within 30 minutes of any emergency calls. The District Health Officers and other related officers shall conduct a meeting regarding this.

7. Honorarium shall be provided to the election staff through cashless , deposited to their bank accounts in advance.

8. Necessary facilities shall be provided for the women and differently abled election staff on duty.

9. A help desk shall be opened in advance to provide guidance to the election staff.

## Help measures for Security personnel, Central Armed Reserved Forces

All necessary facilities has been ensured to the Armed Reserve Forces and security personnel who are on election duty. Facilities like ration, gas cylinder, drinking water, health facility, toilet facility, etc., is being ensured. As the elections are held during summer it is ensured that the centres have fan or coolers. An officer from the Revenue Department has been nominated to overlook the requirements of the armed forces personnel. The District Election Officer and the District Superintendent of Police shall take out time and visit the place where the armed reserve forces personnel are put up and discuss with them and instil confidence. Extra concern shall be taken to monitor the requirements of the CRPF personnel and ensure all necessary measures to conduct smooth voting by discussing with them.

*********